ಇ) ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ) 14 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಶಾಲಾಭಿವೃದ್ಧಿ ಸಮಿತಿಯನ್ನು ರಚಿಸಲಾಗಿದೆ. ಸರ್ಕಾರಿ ಪ್ರೌಢಶಾಲೆಗಳಲ್ಲಿ ಶಾಲಾಭಿವೃದ್ಧಿ ಸಮಿತಿಗಳನ್ನು ರಚಿಸಿರುವುದಿಲ್ಲ.

ಶಾಂತಿನಗರದಲ್ಲಿರುವ ಗ್ರಂಥಾಲಯಗಳು.

440 - ಶ್ರೀಮತಿ ಡಿ.ಜಿ. ಹೇಮಾವತಿ (ಶಾಂತಿನಗರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರದಲ್ಲಿರುವ ಒಟ್ಟು ಗ್ರಂಥಾಲಯಗಳ ಸಂಖ್ಯೆ ಎಷ್ಟು*

ಆ) *ಒಟ್ಟು ಗ್ರಂಥಾಲಯಗಳಲ್ಲಿ ಶಾಂತಿನಗರ ವಿಧಾನ ಸಭಾ ಕ್ಷೇತ್ರದಲ್ಲಿರುವ ಗ್ರಂಥಾಲಯಗಳ ಸಂಖ್ಯೆ ಎಷ್ಟು?*

ಇ) *1995-96ನೇ ಸಾಲಿನಲ್ಲಿ ಶಾಂತಿನಗರ ವಿಧಾನ ಸಭಾ ಕ್ಷೇತ್ರದಲ್ಲಿ ಗ್ರಂಥಾಲಯಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಇದೆಯೇ?*

ಶ್ರೀ ಹೆಚ್.ಜಿ. ಗೋವಿಂದೇಗೌಡ - (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) 65

ಆ) 04

ಇ) ಇಲ್ಲ.

ಸಿರ್ಸಿ-ಅಂಕೋಲ ತಾಲ್ಲೂಕುಗಳಲ್ಲಿ ವೈದ್ಯರ ಕೊರತೆ.

441 - ಶ್ರೀ ವಿಶ್ವೇಶ್ವರ ಹೆಗ್ಗಡೆ (ಅಂಕೋಲ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸಿರ್ಸಿ, ಯಲ್ಲಾಪುರ ಮತ್ತು ಅಂಕೋಲ ತಾಲ್ಲೂಕುಗಳಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಇದೆಯೇ?*

ಆ) *ಸದರಿ ಕೊರತೆಯನ್ನು ನೀಗಿಸಲು ಸರ್ಕಾರ ಕೂಡಲೇ ಕ್ರಮಕೈಗೊಳ್ಳುವುದೆ?*

ಡಾ. ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಸಿರ್ಸಿ, ತಾಲ್ಲೂಕಿನಲ್ಲಿ 5 ವೈದ್ಯರ ಹುದ್ದೆ, ಯಲ್ಲಾಪುರ ತಾಲ್ಲೂಕಿನಲ್ಲಿ 5 ವೈದ್ಯರ ಹುದ್ದೆ ಹಾಗೂ ಅಂಕೋಲ ತಾಲ್ಲೂಕಿನಲ್ಲಿ 5 ವೈದ್ಯರ ಹುದ್ದೆ ಕೊರತೆ ಇದೆ. ತಾಲ್ಲೂಕುವಾರು ವೈದ್ಯರ ಖಾಲಿ ಹುದ್ದೆ ಮಾಹಿತಿ ಲಗತ್ತಿಸಿದೆ.

ಆ) ಈ ಮೇಲಿನ ವೈದ್ಯರ ಖಾಲಿ ಹುದ್ದೆಗಳನ್ನು ಸ್ನಾತಕೋತ್ತರ ವ್ಯಾಸಂಗ ಮುಗಿಸಿ ಹಿಂತಿರುಗಿ ಬರುವ ವೈದ್ಯರಿಂದ ತುಂಬಲಾಗುವುದು. ಹಾಗೂ ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆಹೊಂದಿ ಬರುವ ವೈದ್ಯರಿಂದ ಖಾಲಿ ಹುದ್ದೆಗಳನ್ನು ತುಂಬಲಾಗುವುದು. ಮತ್ತು ಗುತ್ತಿಗೆ ಆಧಾರದ ವೈದ್ಯರಿಂದಲೂ ಹುದ್ದೆ ಭರ್ತಿ ಮಾಡಲಾಗುವುದು.

ಅಂಕೋಲ ಕ್ಷೇತ್ರಕ್ಕೆ ಮಲೆನಾಡು ಅಭಿವೃದ್ಧಿ ಮಂಡಳಿಯಿಂದ ನಿಗಧಿಯಾದ ಹಣ.

442 - ಶ್ರೀ ವಿಶ್ವೇಶ್ವರ ಹೆಗ್ಡೆ (ಅಂಕೋಲ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂಕೋಲ ಕ್ಷೇತ್ರಕ್ಕೆ ಮಲೆನಾಡು ಅಭಿವೃದ್ಧಿ ಮಂಡಳಿ ಯೋಜನೆಯಲ್ಲಿ 1995-96ಕ್ಕೆ ನಿಗಧಿ ಮಾಡಿರುವ ಹಣವೆಷ್ಟು?

ಆ) ಹಳೆ ಕಾಮಗಾರಿಗೆ ಮತ್ತು ಹೊಸ ಕಾಮಗಾರಿಗೆ ನಿಗಧಿಪಡಿಸಿರುವ ಹಣವೆಷ್ಟು?

ಇ) ಇಲ್ಲಿಯತನಕ ಬಾಕಿಯಿರುವ ಹಳೇ ಕಾಮಗಾರಿಗಳೆಷ್ಟು, (ತಾಲ್ಲೂಕುವಾರು ಕಾಮಗಾರಿ ವಿವರ ಒದಗಿಸುವುದು)?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು) :

ಅ) 1995-96ನೇ ಸಾಲಿನ ಕ್ರಿಯಾಯೋಜನೆಯನ್ನು ಮಂಡಳಿಯಿಂದ ನಿರೀಕ್ಷಿಸಲಾಗಿದೆ.

ಆ) ಕ್ರಿಯಾ ಯೋಜನೆಯು ಅನುಮೋದನೆಯಾದ ನಂತರ, ಅಂಕೋಲಾ ಕ್ಷೇತ್ರಕ್ಕೆ ನಿಗಧಿಪಡಿಸಿದ ಮೊತ್ತ ತಿಳಿಯುತ್ತದೆ.

3) 46 ಕಾಮಗಾರಿಗಳು, ವಿವರಗಳನ್ನು ಅನುಬಂಧ - 1ರಲ್ಲಿ ನೀಡಲಾಗಿದೆ.